ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

10

ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 29/12/20

# ಆಸ್ತಿ ತೆರಿಗೆ ಹೆಚ್ಚಿಸದಿರಲು ಸಂಪುಟ ನಿರ್ಧಾರ

ಉವಾ 29/12/20

ಬೆಂಗಳೂರು: 2020-21 ನೇ ಸಾಲಿಗೆ ಆಸ್ತಿ ತೆರಿಗೆ ಸಂಬಂಧ ಜನರಿಗೆ ತೊಂದರೆಯಾಗುತ್ತದೆ ಎನ್ನುವ ಕಾರಣಕ್ಕೆ ಸುಗ್ರೀವಾಜ್ಞೆ ಮೂಲಕ ಆಸ್ತಿ ತೆರಿಗೆ ಹೆಚ್ಚಳ ಮಾಡದಿರಲು ಸಂಪುಟ ಸಭೆ ನಿರ್ಧರಿಸಿದೆ. ಶೆ. 25ರಿಂದ 30ರಷ್ಟು ಆಸ್ತಿ ತೆರಿಗೆ ಹೆಚ್ಚಳಕ್ಕೆ ಈ ಹಿಂದೆ ರಾಜ್ಯ ಸರ್ಕಾರ ಮುಂದಾಗಿತ್ತು. ಕೊರೊನಾ ಹಿನ್ನಲೆಯಲ್ಲಿ ಆಸ್ತಿ ತೆರಿಗೆ ಹೆಚ್ಚಳ ಕೈಬಿಡುವಂತೆ ಸಾರ್ವಜನಿಕರಿಂದ ಒತ್ತಡ ಹೆಚ್ಚಿದ ಕಾರಣ ಸರ್ಕಾರ ಸುಗ್ರೀವಾಜ್ಞೆ ಮೂಲಕ ಹೆಚ್ಚಳ ಮಾಡದಿರಲು ನಿರ್ಧರಿಸಿದೆ. ಬಿಬಿಎಂಪಿ ಚುನಾವಣೆಗೆ ಸುಪ್ರೀಂ ಕೋರ್ಟ್ ಫೆಬ್ರವರಿವರೆಗೂ ತಡೆಯಾಜ್ಞೆ ನೀಡಿರುವುದರಿಂದ ರಾಜ್ಯ ಸರ್ಕಾರಕ್ಕೆ ಸಮಯವಿದೆ. ಈ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ಗೆ ವಾರ್ಡ್ ಹೆಚ್ಚಳದ ಬಗ್ಗೆ ಮನವರಿಕೆ ಮಾಡಿಕೊಡಲು ಸಿದ್ಧತೆ ಮಾಡಿಕೊಳ್ಳುತ್ತೇವೆ ಎಂದು ಸಂಪುಟ ಸಭೆ ಬಳಿಕ ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.

## ಗೊಂದಲ ಚರ್ಚೆಯಾಗಿಲ್ಲ

ಸೇಫ್ ಸಿಟಿ ಟೆಂಡರ್ ಸಂಬಂಧಿಸಿ ಐಪಿಎಸ್ ಅಧಿಕಾರಿಗಳಾದ ಹೇಮಂತ್ ನಿಂಬಾಳ್ಕರ್ ಮತ್ತು ಡಿ. ರೂಪಾ ಮೌದ್ಗಿಲ್ ನಡುವಿನ ಶೀತಲ ಸಮರದ ಬಗ್ಗೆ ಸಂಪುಟ ಸಭೆಯಲ್ಲಿ ಯಾವುದೇ ರೀತಿಯ ಚರ್ಚೆಯಾಗಿಲ್ಲ. ಈ ಬಗ್ಗೆ ಚರ್ಚೆ ನಡೆಸಬೇಕಿತ್ತು. ಆದರೆ, ಇನ್ನೂ ಅಷ್ಟೊಂದು ಗಂಭೀರ ಮಟ್ಟಕ್ಕೆ ಹೋಗಿಲ್ಲ ಎನ್ನುವ ಕಾರಣಕ್ಕೆ ಅದನ್ನು ಚರ್ಚಿಸಲು ಹೋಗಲಿಲ್ಲ. ಅದೇ ರೀತಿ ಜ. 1 ರಂದು ಶಾಲೆ ಆರಂಭದ ಬಗ್ಗೆಯೂ ಸಂಪುಟದಲ್ಲಿ ಚರ್ಚೆ ನಡೆದಿಲ್ಲ ಎಂದು ಮಾಧುಸ್ವಾಮಿ ಹೇಳಿದರು.

## ಜ.18 ರಿಂದ ಜಂಟಿ ಅಧಿವೇಶನ?

ಜನವರಿ ತಿಂಗಳಲ್ಲಿ ಜಂಟಿ ಅಧಿವೇಶನ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ವರ್ಷದ ಮೊದಲ ಅಧಿವೇಶನವನ್ನು ರಾಜ್ಯಪಾಲರ ಜಂಟಿ ಅಧಿವೇಶನದ ಮೂಲಕ ಆರಂಭಿಸಲಿದ್ದು ಜ.18 ರಿಂದ ಅಧಿವೇಶನ ನಡೆಸುವ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ತಿಳಿದು ಬಂದಿದೆ. ಈ ಕುರಿತಂತೆ ಮುಂದಿನ ಸಂಪುಟ ಸಭೆಯಲ್ಲಿ ಅಧಿಕೃತ ದಿನಾಂಕ ಪ್ರಕಟಿಸಲು ಸರ್ಕಾರ ನಿರ್ಧರಿಸಿದೆ ಎಂದು ತಿಳಿದು ಬಂದಿದೆ.

## ಸಂಪುಟದ ಪ್ರಮುಖ ತೀರ್ಮಾನಗಳು

- 143ನೇ ವಿಧಾನ ಸಭೆ ಮತ್ತು ಪರಿಷತ್ ಅಧಿವೇಶನ ಸಮಾಪ್ತಿ, ಕರ್ನಾಟಕ ಖಾಸಗಿ ಭದ್ರತಾ ಏಜೆನ್ಸಿ(ಖಾಸಗಿ ಏಜೆನ್ಸಿ ಹಣ ಸಾಗಾಣಿಕೆ) ನಿಯಮ 2020 ಅನುಮೋದನೆ
- ರಾಜ್ಯ ಪೊಲೀಸ್ ಸಚಿವಾಲಯ ಸೇವಾ ನಿಯಮಾವಳಿ (ತಿದ್ದುಪಡಿ) 2020, ತೋಟಗಾರಿಕಾ ವಿಶ್ವವಿದ್ಯಾನಿಲಯ (ತಿದ್ದುಪಡಿ) ನಿಯಮಾವಳಿ 2020ಕ್ಕೆ ಅನುಮೋದನೆ
- ಕರ್ನಾಟಕ ಮುನಿಸಿಪಲ್ ಮತ್ತು ಇತರೆ ಕಾನೂನುಗಳ ತಿದ್ದುಪಡಿ ವಿಧೇಯಕ 2020ಕ್ಕೆ ಸುಗ್ರೀವಾಜ್ಞೆ, ತುರ್ತು ಸಂದರ್ಭ ಪ್ರತಿಕ್ರಿಯಾ ವ್ಯವಸ್ಥೆ 100ರ ಬದಲಾಗಿದೆ, 112 ನಂಬರ್ ಜಾರಿಗೊಳಿಸಲು 35.47ಕೋಟಿ ರೂ.
- ಶಿವಮೊಗ್ಗದಲ್ಲಿ ರ್‍ಯಾಪಿಡ್ ಆ್ಯಕ್ಷನ್ ಫೋರ್ಸ್ ಬೆಟಾಲಿಯನ್ ಗೆ 50 ಎಕರೆ ಜಮೀನು ಮಂಜೂರು, ಬೇಲೂರು ತಾಲೂಕಿನ ರಣಘಟ್ಟ ಪಿಕ್ ಕುಡಿಯುವ ನೀರಿನ ಯೋಜನೆ 125.46 ಕೋಟಿ ರೂ ಯೋಜನೆಗೆ ಒಪ್ಪಿಗೆ
- ಕೋಲಾರ ನಗರ, ಮಾಲೂರು, ಬಂಗಾರಪೇಟೆಗೆ ಕುಡಿಯುವ ನೀರು ಸರಬರಾಜು 127.76 ಕೋಟಿ ರೂ ಯೋಜನೆ, ಜಪಾನೀಸ್ ಅನುದಾನದಿಂದ ಅಡ್ವಾನ್ಸ್ ಟ್ರಾಫಿಕ್ಸ್ ಇನ್ಫರ್ಮೇಷನ್ ಮತ್ತು ಮ್ಯಾನೇಜ್ಮೆಂಟ್ ವ್ಯವಸ್ಥೆ